**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಮುಳಬಾಗಿಲು.**

ಸಿ.ಸಿ.ನಂಃ **563/2022**

| | | |
|---|---|---|
| ಫಿರ್ಯಾದುದಾರರು | : | ಎಲ್. ಗಾವಪ್ಪ.,<br>ಬಿನ್ಃ ಲೇಟ್ ಲಕ್ಷ್ಮಯ್ಯ. |

-ವಿರುದ್ಧ-

| | | |
|---|---|---|
| ಆರೋಪಿ | : | ಆರ್. ವೇಣುಗೋಪಾಲ್.,<br>ಬಿನ್ಃ ಟಿ. ರಾಮಕೃಷ್ಣಪ್ಪ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ-251 ರ ಪ್ರಕಾರ ಆರೋಪಣೆ**

ಆರೋಪಿಯಾದ ನೀವು, ಫಿರ್ಯಾದುದಾರರಿಂದ ಪಡೆದುಕೊಂಡ ಸೂಕ್ತ ಮೌಲ್ಯವುಳ್ಳ ಪ್ರತಿಫಲದ ಬಾಬ್ತು ಅವರಿಗೆ ಕೊಡಬೇಕಾಗಿರುವ ಹಣದ ಮರು-ಪಾವತಿಗಾಗಿ ದಿನಾಂಕಃ**13.01.2022** ರಂತೆ ಮುಂದಿನ ದಿನಾಂಕ ನಮೂದಿಸಿದ ಮುಳಬಾಗಿಲು ಶಾಖೆಯ ಕೊಟಕ್ ಮಹೀಂದ್ರ ಬ್ಯಾಂಕಿನ ಚೆಕ್ ನಂ.**000004** ರ ಚೆಕ್ಕನ್ನು ರೂ.**3,50,000/-** (ಮೂರು ಲಕ್ಷ ಐವತ್ತು ಸಾವಿರ ರೂಪಾಯಿ)ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ನಗದುಗೊಳಿಸಲು ಮುಳಬಾಗಿಲು ಶಾಖೆಯ ಎಸ್.ಬಿ.ಐ ಬ್ಯಾಂಕ್ ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಚೆಕ್ಕು '**ಸಾಕಷ್ಟು ಹಣವಿಲ್ಲ'** ಎಂಬ ಕಾರಣಕ್ಕಾಗಿ ಅನಾಧರಣಗೊಂಡಿರುತ್ತದೆ. ಈ ಬಗ್ಗೆ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ನೋಟೀಸನ್ನು ದಿಃ**02.02.2022** ರಂದು ನೀಡಿ, ಸದರಿ ಸಂಗತಿಯನ್ನು ತಿಳಿಸಿದಾಗ್ಯೂ ಸಹ ನೀವು ಫಿರ್ಯಾದುದಾರರಿಗೆ ನಿಯಮಿತ ಅವಧಿಯಲ್ಲಿ ಹಣವನ್ನು ಸಂದಾಯ ಮಾಡುವಲ್ಲಿ ವಿಫಲರಾಗಿರುತ್ತೀರಿ. ಆ ಕಾರಣದಿಂದ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆಯ ಕಲಂ-**138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಅಂತ ನಿಮ್ಮ ವಿರುದ್ಧ ಆರೋಪಣೆ ಹೊರಿಸಲಾಗಿದೆ.

**ಪ್ರ-1** ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೇ?
ಉಃ

**ಪ್ರ-2** ವಿವಾದಿತ ಚೆಕ್ಕು ನಿಮ್ಮ ಬ್ಯಾಂಕ್ ಖಾತೆಗೆ ಸೇರಿರುತ್ತದೆಯೇ?
ಉಃ

**ಪ್ರ-3** ವಿವಾದಿತ ಚೆಕ್ಕಿನಲ್ಲಿರುವ ಸಹಿಯು ನಿಮ್ಮದು ಎಂದು ಒಪ್ಪಿಕೊಳ್ಳುತ್ತೀರಾ?
ಉಃ

**ಪ್ರ-4** ವಿವಾದಿತ ಚೆಕ್ಕನ್ನು ನೀವು ಫಿರ್ಯಾದುದಾರರಿಗೆ ನೀಡಿರುತ್ತೀರಾ?
ಉಃ

**ಪ್ರ-5** ಹಾಗಾದರೆ ವಿವಾದಿತ ಚೆಕ್ಕನ್ನು ನೀವು ಫಿರ್ಯಾದುದಾರರಿಗೆ ನೀಡುವ ಸಮಯದಲ್ಲಿ ಅವರಿಗೆ ಹಣವನ್ನು ಕೊಡುವ ಭಾದ್ಯತೆ ಇತ್ತೇ?
ಉಃ

**ಪ್ರ-6** ನಿಮ್ಮ ಬಾಧ್ಯತೆಯನ್ನು ಅಲ್ಲಗಳೆಯುವುದಾದರೆ ನಿರ್ದಿಷ್ಟವಾಗಿ ನಿಮ್ಮ ಪ್ರತಿರಕ್ಷಣೆಯನ್ನು ತಿಳಿಸಿ ಅಂದರೆ, ಚೆಕ್ಕನ್ನು ಕೇವಲ ಭದ್ರತೆಗಾಗಿ ನೀಡಲಾಗಿರುತ್ತದೆಯೇ ಅಥವಾ ಸಾಲವನ್ನು ಮರು-ಪಾವತಿಸಲಾಗಿದೆಯೇ ಅಥವಾ ಚೆಕ್ಕನ್ನು ತಿದ್ದುಪಡಿ ಮಾಡಲಾಗಿದೆಯೇ ಅಥವಾ ದುರುಪಯೋಗಪಡಿಸಿಕೊಳ್ಳಲಾಗಿದೆಯೇ ಅಥವಾ ಬೇರೆ ಕಾರಣಗಳು ಇರುತ್ತವೆಯೇ?
ಉಃ

**ಪ್ರ-7** ರಾಜೀ ಮಾಡಿಕೊಳ್ಳಲು ಇಚ್ಚಿಸುತ್ತೀರಾ?
ಉಃ

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ವಿವರಿಸಿ, ಆತ ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

**(ಹರೀಶ್ ಜಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮುಳಬಾಗಿಲು.

ದಿಃ**04.08.2026**

ಆರೋಪಿ ಸಹಿ